ಗೊತ್ತಾಗದಂತಿದ್ದಳು. ನೋಡಿದರೆ ಮತ್ತೆ ತಿರುಗಿ ನೋಡುವ ಚೆಲುವು. ಇತ್ತೀಚೆಗೆ ಇವರಿಬ್ಬರ ಮಾತಿನ ಸುತ್ತ ಸಿದ್ಧಣ್ಣನ ವಿಚಾರ ಹೆಚ್ಚು ಬರುತ್ತಿತ್ತು.

ಸಿದ್ಧಣ್ಣ ಬೆಸ್ತರ ನಿಂಗಣ್ಣನ ಮಗ. ಚಿಕ್ಕಂದಿನಲ್ಲಿ ಅದೇನೋ ಕದ್ದು ಊರುಬಿಟ್ಟಿದ್ದವನು ಹದಿನೈದು ವರ್ಷದ ನಂತರ ಮತ್ತೆ ಬಂದು ಸೇರಿದ್ದನು. ಊರಿನ ಸುತ್ತ ನಡೆಯುವ ಕಲ್ಲಿನ ಕ್ವಾರಿಗೆ ಕೆಲಸಕ್ಕೆ ಹೋಗುತ್ತಿದ್ದನು. ಆಗಾಗ್ಗೆ ಸುಗ್ಗಿಯಲ್ಲಿ ಹೊಲ ಕೊಯ್ಯುವುದು, ಒಕ್ಕಣೆ ಮಾಡುವುದು, ಮೆದೆ ಹಾಕುವುದು ಇತ್ಯಾದಿಗಳನ್ನೂ ಮಾಡಿ ಕೆಲಸದಾಳು ಎನಿಸಿಕೊಂಡನು. ರಾತ್ರೋರಾತ್ರಿ ಟ್ರ್ಯಾಕ್ಟರ್‌ಗೆ ಮರಳು ತುಂಬುವ ಕೆಲಸದಲ್ಲೂ ಇವನ ಕೈಗುರುತಿರುತ್ತಿದ್ದವು. ನೋಡಲು ಎತ್ತರವಾಗಿಯೂ, ದೃಢಕಾಯವಾಗಿಯೂ ಇದ್ದನು. ಸದಾ ಲುಂಗಿ, ಮೇಲೊಂದು ತುಂಬನೆಯ ಕವಚ, ಅದರ ಮೇಲೊಂದು ಟವೆಲ್, ಇವಿಷ್ಟು ಇದ್ದೇ ಇರುತ್ತಿದ್ದವು. ಕೆಂಪಗಿದ್ದುದರಿಂದ ನಕ್ಕಾಗ ಇನ್ನಷ್ಟು ಕೆಂಪಾಗುತ್ತಿದ್ದನು. ತಲೆಯ ತುಂಬಾ ಗುಂಗುರು ಕೂದಲು ಇದ್ದುದರಿಂದ ಅದನ್ನು ಹೆಂಗೆಗೋ ತಿರುಗಿಸಿಕೊಳ್ಳುತ್ತಿದ್ದನು. ಊರಿನಲ್ಲಿ ಇತ್ತೀಚೆಗೆ ಎಲ್ಲರೂ ಒಂದಲ್ಲಾ ಒಂದು ಕಾರಣಕ್ಕೆ ಅವನನ್ನು ಮಾತನಾಡಿಸುತ್ತಿದ್ದರು. ಎಲ್ಲರ ಬಾಯ ಸನಿಹದಲ್ಲಿ ಅವನ ಹೆಸರಿತ್ತು.

ಒಮ್ಮೆ ಕಮಲಕ್ಕ ಹಿತ್ತಲಿನ ಬಾಗಿಲು ತೆರೆದು ಅವ್ವನನ್ನು ಕೂಗಿಕೊಂಡಳು. ಅವ್ವ ಓಡಿದಳು. ನಾನು ಹಿಂದೆಯೇ ನಡೆದೆ. ಆ ಹಿತ್ತಲಿನಲ್ಲಿ ಎರಡು ಮರಗಳು ಬೃಹದಾಕಾರವಾಗಿ ನಿಂತಿದ್ದವು. ಅದರ ಮೇಲೆ ಆಗತಾನೆ ಗೂಡು ಕಟ್ಟಿದ್ದ ಎರಡು ಹಕ್ಕಿಗಳು ಸಂಸಾರ ಹೂಡಿದ್ದವು. ಇತ್ತೀಚೆಗೆ ಸಂಜೆಯಾಗುತ್ತಲೇ ಗಿಣಿಗಳ ದಂಡು ಬಂದು ಕೂತು ಮತ್ತೆ ಹಾರುತ್ತಿದ್ದವು. ದೂರದಿಂದ ನೋಡಿದರೆ ಎರಡು ಮರಗಳು ನಿಂತು ಸದಾ ಮಾತನಾಡಿಕೊಳ್ಳುತ್ತಿರುವಂತೆ ಕಾಣುತ್ತಿತ್ತು. ಆ ಎರಡು ಮರದ ಕೆಳಗೇ ದೊಡ್ಡ ತಿಪ್ಪೆ ಇತ್ತು. ಆ ಮನೆಯ ಸೆಗಣಿಯೆಲ್ಲಾ ಅಲ್ಲೇ ವಾಸಮಾಡುತ್ತಿತ್ತು. ಅದರ ಮುಂದೆಯೇ, ಆ ಮರಗಳ ಮಧ್ಯದಲ್ಲಿಯೇ ಎರಡು ಕಲ್ಲುಗಳಿದ್ದವು. ಅವುಗಳ ಮೇಲೆ ಕುಂತು ಇವರಿಬ್ಬರು ಮಾತನಾಡಿಕೊಳ್ಳುತ್ತಿದ್ದರು. ಹತ್ತಿರ ಹೋಗುವ ಆಸೆಯಾಯಿತು. ಆದರೆ, ಅವ್ವನ ಕೆಂಗಣ್ಣಿಗೆ ಹೆದರಿ

